**ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ**

6. ಈ ದಾವೆಯನ್ನು ನಾನು ಕೇವಲ 1 ಸರ್ವೆ ನಂಬರಿಗೆ ಸಂಬಂದಿಸಿದಂತೆ ಮಾಡಿದ್ದೇನೆ. ಉತ್ತರ ದಿಕ್ಕಿಗೆ ಗೋಣೆಪ್ಪನ ಹೊಲ ಇರುವುದು. ದಕ್ಷಿಣಕ್ಕೆ ತುಪ್ಪದಹಳ್ಳಿ ಹಾದಿ ಇರುವುದು. ಪೂರ್ವಕ್ಕೆ ಮೆಳಕಟ್ಟಿ ರಮೇಶಪ್ಪನ ಹೊಲ ಇರುವುದು, ಪಶ್ಚಿಕ್ಕೆ ನಾಗರಾಜಪ್ಪನ ಹೊಲ ಇರುವುದು. ನಾನು ಈಗ ಹೇಳಿರುವ ಚೆಕ್ಕು ಬಂದಿಗಳು ನನ್ನ ವಾದ ಪತ್ರದಲ್ಲಿ ಉಲ್ಲೇಕ ಇರುವುದಿಲ್ಲ ಅಂದರೆ ಸರಿ. ದಾವಾ ಅಸ್ತಿಯು ಯಾವ ಕಡೆಗೆ ಉದ್ದವಾಗಿದೆ ಅಂದರೆ ಏರಡೂ ಕಡೆಗೂ ಉದ್ದವಾಗಿರುವುದು. ದಾವಾ ಅಸ್ತಿಯು ಪೂರ್ವದಿಂದ ಪಶ್ಚಿಮಕ್ಕೆ ಉದ್ದವಾಗಿದ್ದು ಅದರಲ್ಲಿ ಅರ್ದ ಭಾಗ ನಮಗೆ ಬರುತ್ತದೆ. ಅರ್ಧ ಭಾಗ ಅಂದರೆ 1 ಎಕರೆ 46 ಸೆಸ್ಸ.

7. ಪ್ರತಿವಾದಿಯು ದಾವಾ ಅಸ್ತಿಯಲ್ಲಿ 1 ಎಕರೆ 46 ಸೆಸ್ಸ ನಲ್ಲಿ ಸ್ವಾಧೀನದಲ್ಲಿರುವರು. ಪ್ರತಿವಾದಿಯು ಯಾವ ಇಸವಿಯಲ್ಲಿ ದಾವಾ ಅಸ್ತಿಯನ್ನು ಕೊಂಡುಕೊಂಡಿರುವರು ಎಂದು ನನಗೆ ಮಾಹಿತಿ ಇದೆ ಅಂದರೆ ಸರಿಯಲ್ಲ. ದಿನಾಂಕ 19.06.2012 ರಲ್ಲಿ ಪ್ರತಿವಾದಿ ಚಂದ್ರಪ್ಪ ನಿಂದ ದಾವಾ ಅಸ್ತಿಯನ್ನು ರೂ 66,000/- ಕ್ಕೆ ಖರೀದಿ ಮಾಡಿರುವರು ಅಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಖರೀದಿ ಮಾಡಿದ ಅಸ್ತಿಯ ಪೂರ್ವಕ್ಕೆ ಕುರುಬರ ಬಾವಜ್ಜಿ ಗೋಣೆಪ್ಪ ಇವರ ಜಮೀನು ಇರುವುದು ಅಂದರೆ ಸರಿಯಲ್ಲ. ಅದರ ಪಶ್ಚಿಮಕ್ಕೆ ಖರೀದಿ ಮಾಡಿದ ಜಮೀನಿನ ಭಾಗ ಅಂದರೆ 399/ಬಿ ಬರುತ್ತದೆ ಅಂದರೆ ಸರಿಯಲ್ಲ. ಉತ್ತರಕ್ಕೆ ಬರಮಣ್ಣ ಉಜ್ಜಪ್ಪನವರ ಜಮೀನು ಇದೆ ಅಂದರೆ ಸರಿ. ದಕ್ಷಿಣಕ್ಕೆ ಆಲೂರು ಚೌಡಪ್ಪನ ಜಮೀನು ಇದೆ ಸರಿ.

8. ನಾನು ಈ ದಾವೆಯನ್ನು ಹಾಕುವ ಮೊದಲು 6 ನೇ ಪ್ರತಿವಾದಿ ತಿಮ್ಮಪ್ಪನ ಬಗ್ಗೆ ತಿಳಿದುಕೊಂಡಿರುವುದಿಲ್ಲ. 5 ನೇ ಪ್ರತಿವಾದಿ ಹನುಮಜ್ಜನ ಚೆಂದ್ರಪ್ಪನ ಬಗ್ಗೆಯೂ ತಿಳಿದುಕೊಂಡಿರುವುದಿಲ್ಲ. ವಾದ ಪತ್ರವನ್ನು ಸಲ್ಲಿಸಲು ನಾನೇ ಮಾಹಿತಿ ನೀಡಿದ್ದೇನೆ. 5 ಮತ್ತು 6 ನೇ ಪ್ರತಿವಾದಿಯ ವಿಚಾರವನ್ನು ನಾನು ವಾದ ಪತ್ರ ಹಾಕುವ ಕಾಲಕ್ಕೆ ಹೇಳಿರುವುದಿಲ್ಲ ಅಂದರೆ ಸರಿ. ನಾನು 5 ಮತ್ತು 6 ನೇ ಪ್ರತಿವಾದಿಯ ವಿರುದ್ಧ ಈ ದಾವೆಯಲ್ಲ ಯಾವುದೇ ಪರಿಹಾರವನ್ನು ಕೇಳಿರುವುದಿಲ್ಲ ಅಂದರೆ ಸರಿಯಲ್ಲ. ಅವರ ವಿರುದ್ಧ ಯಾವ ಪರಿಹಾರವನ್ನು ಕೇಳಿದ್ದೇನೆ ಎಂದು ನನಗೆ ಈಗ ಹೇಳಲಾಗುವುದಿಲ್ಲ. ಅವರು ಹೊಲಗಳನ್ನು ಖರೀದಿ ಮಾಡಿದ ಕಾರಣಕ್ಕೆ ಅವರನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. ಖರೀದಿ ಮಾಡಿದ ದಿನದಿಂದ 5 ಮತ್ತು 6 ನೇ ಪ್ರತಿವಾದಿಯರು ಅವರು ಖರೀದಿ ಮಾಡಿದ ಹೊಲವನ್ನು ಬಿತ್ತಿ ಬೆಳೆಯುತ್ತಿದ್ದಾರೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

07-03-2026
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 07.03.2026